O.S.No. 329/2015
PW -1

ದಿನಾಂಕಃ 21-10-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಪಾಟೀ ಸವಾಲು :- ಶ್ರೀ ಜಿ.ಬಿ.ಹೆಚ್ ಪ್ರತಿ ವಾದಿ ಪರ ವಕೀಲರಿಂದ

ನಾನು ಹಿಂದೂಪುರ ಗ್ರಾಮದಲ್ಲಿ ಎಂದಿಗೂ ವಾಸ ಇರುವುದಿಲ್ಲ. ನಾನು ಹಿಂದುಾಪುರದಲ್ಲಿ ಮದುವೆಯಾಗಿರುತ್ತೇನೆ. ನನ್ನ ಮದುವೆಯಾಗಿ 20 ವರ್ಷಗಳು ಆಗಿರುತ್ತವೆ. ನಾನು ಮದುವೆಯಾದ ದಿನದಿಂದ ಹಿಂದೂಪುರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ.

ನನಗೆ ಇಬ್ಬರು ಮಕ್ಕಳು ಅವರು ಸಹ ಹಿಂದೂಪುರದಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ನಾನು ಮೊದಲಿನಿಂದಲೂ ಮತ ಚಲಾವಣೆ ಮಾಡುತ್ತಿದ್ದೇನೆ, ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್ ಸಹ ನನ್ನ ಬಳಿ ಇದೆ. ಅವು ಎಲ್ಲವೂ ಸಹ ಸಿದ್ದನಹಳ್ಳಿ ಗ್ರಾಮದಲ್ಲಿ ಇರುತ್ತವೆ. ಸದರಿ ದಾಖಲೆಗಳನ್ನು ನ್ಯಾಯಲಾಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇಲ್ಲ. ನಾನು ಸುಮಾರು 4 ವರ್ಷಗಳಿಂದ ಹಿಂದೂಪುರಕ್ಕೆ ಹೋಗಿ ಬಂದು ಮಾಡುತ್ತಿದ್ದೇನೆ. ನಾನು ಹಿಂದೂಪುರದಲ್ಲಿ ಹೊಟೆಲ್‌ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಹೊಟೆಲ್ ನ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ನಾನೇ ಹೊಟೆಲ್ ನಡೆಸುತ್ತಿದ್ದರೂ ಸಹ ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ 1 ಜಮೀನು ಬಂಜರು ಹಾಗೂ ದಿನ್ನೆ ಜಮೀನು ಆಗಿರುತ್ತದೆ. ಎಷ್ಟು ವರ್ಷಗಳಿಂದ ಬೀಳು ಬಿದಿದ್ದೆ ಎಂದರೆ ಅದರಲ್ಲಿ ಬೆಳೆ ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಬೆಳೆ ಬೆಳೆಯುತ್ತಿರುವ ಬಗ್ಗೆ ದಾಖಲೆ ಇದೆ.

ನನ್ನ ತಂದೆಗೆ ಒಟ್ಟು 3 ಜನ ಅಣ್ಣತಮ್ಮಂದಿರು ಅವರುಗಳು ಮುದ್ದಪ್ಪ , ನಂಜಪ್ಪ ಮತ್ತು ಗಂಗಪ್ಪ. ನನ್ನ ತಂದೆಗೆ ಅಕ್ಕ ತಂಗಿಯರು ಯಾರು ಇರುವುದಿಲ್ಲ. ಇವರು ಮೂರು ಜನರು ತನ್ನ ತಂದೆ ಇರುವ ಕಾಲದಲ್ಲಿ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಅವರು ವ್ಯವಸಾಯ ಮಾಡುತ್ತಿರಲಿಲ್ಲ ಬೇರೆ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ಭಾಗ ಆಗಿದೆ. ನಾನು 16 ವರ್ಷ ಹುಡುಗನಾಗಿದ್ದ ಸಮಯದಲ್ಲಿ ಆ ರೀತಿ ಭಾಗ ಆಗಿರುತ್ತದೆ. ಅವರುಗಳ ನಡುವೆ ಆದಂತಹ ವಿಭಾಗದ ಅನ್ವಯ ಅವರವರ ಹೆಸರಿಗೆ ಖಾತೆ ಮತ್ತು ಪಹಣಿ ಆಗಿರುವುದಿಲ್ಲ. ನನ್ನ ತಂದೆ ಮತ್ತು ಅವರ ಸಹೋದರರು ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗ ಪತ್ರ ಯಾವ ಸಾಲಿನಲ್ಲಿ ಮಾಡಿಕೊಂಡಿರುತ್ತಾರೊ ನಾನು ಓದಿಲ್ಲ ಆದ ಕಾರಣ ನನಗೆ ಗೊತ್ತಿಲ್ಲ. ನನ್ನ ತಂದೆ ಮಾಡಿಕೊಂಡಂತಹ ವಿಭಾಗ ಪತ್ರ ನೊಂದಣಿ ಆಗಿರುತ್ತದೆ ಸದರಿ ಪತ್ರವನ್ನು ನಾನು ನೋಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಬಳಿ ಸದರಿ ದಾಖಲೆ ಇದೆ ಎಂದು ನುಡಿಯುತ್ತಾರೆ. ಕೇಸು ಹೂಡುವ ಕಾಲಕ್ಕೆ ವಿಭಾಗ ಪತ್ರ ಎಲ್ಲಿದೆ ಎಂದು ನಾನು ಹುಡುಕಾಡಿರುತ್ತೇನೆ. ಸದರಿ ವಿಭಾಗ ಪತ್ರ ನನ್ನ ತಂದೆ ಬಳಿ ಇದೆ

ನನ್ನ ಚಿಕ್ಕಪ್ಪ ರವರು ಪೌವತಿಯಾಗಿರುತ್ತಾರೆ. ಅವರ ಹೆಂಡತಿ ಪೌವತಿಯಾಗಿದ್ದು ಮಕ್ಕಳು ಇರುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ತಲಾ ಒಬಬ್ಬರಿಗೆ 27 ಗುಂಟೆ ಬಂದಿರುತ್ತದೆ. ನಂಜಪ್ಪನ ಭಾಗಕ್ಕೆ ಬಂದಿರುವ ಸ್ವತ್ತಿನ ಚಕ್ಕುಬಂದಿ ಪೂ-ಗಂಗಾಧರಪ್ಪ , ಪ-ಗೋಪಾಲರಾವ್ , ಉ-ಮುದ್ದಪ್ಪ , ದ-ಪುಟ್ಟಪ್ಪ ರವರ ಜಮೀನು. ಮುದ್ದಪ್ಪ ಮತ್ತು ಗಂಗಪ್ಪರವರ ಭಾಗಕ್ಕೆ ಬಂದಿರುವ ಜಮೀನಿಗೆ ಅದೇ ಚಕ್ಕುಬಂದಿ ಇರುತ್ತದೆ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು)

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

(ಅಬ್ದುಲ್ ರಹಿಮಾನ್ ಎ. ಮುಲ್ಲಾ)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ